ಸೃಜನಿ

**SRUJANI: Indian Journal of Innovative Research and Development (SIJIRD)**
Volume-1 Issue 5, November-December 2022, Pp. 78- 83
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ‘ಹೀಗೊಂದು ಪ್ರಕರಣ’ ಕಥೆಯಲ್ಲಿ ದಲಿತರ ಬದುಕಿನ ಅನಾವರಣ: ಒಂದು ಅಧ್ಯಯನ

**ಡಾ. ಹೆಚ್.ಎಸ್.ಪ್ರೇಮಲತ***

*ಕನ್ನಡ ಸಹ ಪ್ರಾಧ್ಯಾಪಕರು, ಶ್ರೀ ಮಹದೇಶ್ವರ ಸರ್ಕಾರಿ, ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ

***Abstract:***

*ಚಾಮರಾಜನಗರ ಜಿಲ್ಲೆಯವರಾದ ಮೂಡ್ನಾಕೂಡು ಚಿನ್ನಸ್ವಾಮಿಯವರು ಹೊಸಗನ್ನಡ ಸಾಹಿತ್ಯದ ಸೃಜನಶೀಲ ಬರಹಗಾರರಲ್ಲಿ ಒಬ್ಬರು. ಕಥೆ, ಕವನ, ಕಾದಂಬರಿ, ನಾಟಕ ಹಾಗೂ ಗದ್ಯ ಪ್ರಕಾರಗಳಲ್ಲಿ ಸುಮಾರು 30 ಕೃತಿಗಳನ್ನು ರಚಿಸಿರುವ ಅವರು ತಮ್ಮ ವೈಚಾರಿಕತೆಯಿಂದ ಗಮನಸೆಳೆದಿದ್ದಾರೆ. ಮೂಲಭೂತವಾಗಿ ಕವಿ ಎಂದೇ ಗುರುತಿಸಿಕೊಂಡಿರುವ ಮೂಡ್ನಾಕೂಡುರವರ ಮೋಹದ ದೀಪ (1999) ಹಾಗೂ ಪಾಪಪ್ರಜ್ಞೆ (2015) ಎಂಬ ಎರಡು ಕಥಾಸಂಕಲನಗಳು ಕೂಡ ಪ್ರಕಟವಾಗಿವೆ. ದಲಿತರ ಬದುಕಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಅವರ ಕತೆಗಳು ಜೀವಂತಗೊಳಿಸುವುದರ ಮೂಲಕ ಸಹೃದಯ ಓದುಗರನ್ನು ಚಿಂತನೆಯತ್ತ ದೂಡುತ್ತವೆ. ಪ್ರಸ್ತುತ ಲೇಖನದಲ್ಲಿ ಪಾಪಪ್ರಜ್ಞೆ ಕಥಾಸಂಕಲನದ ‘ಹೀಗೊಂದು ಪ್ರಕರಣ’ ಎಂಬ ಕಥೆಯ ಸಾರವನ್ನು ವಿಶ್ಲೇಷಿಸಲಾಗಿದೆ.*

***Keywords:*** *ಮೂಡ್ನಾಕೂಡು ಚಿನ್ನಸ್ವಾಮಿ, ದಲಿತರು, ಅಸ್ಪೃಶ್ಯತೆ, ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ.*

**ಪೀಠಿಕೆ**

ಭಾರತದ ಸಾಮಾಜಿಕ ಅಸಮಾನತೆಯ ಬೇರುಗಳು ಹಿಂದೂ ಧರ್ಮದ ವರ್ಣಾಶ್ರಮ ಪದ್ಧತಿಯಲ್ಲಿ ಗಾಢವಾಗಿ ಬೇರೂರಿವೆ. ವರ್ಗ ಹಾಗೂ ಲಿಂಗ ಭೇದಗಳು ಕೂಡ ಮನುಷ್ಯ-ಮನುಷ್ಯರ ನಡುವಿನ ಆಳವಾದ ಕಂದಕವೇರ್ಪಡಲು ಕಾರಣವಾಗಿವೆ. ಹೀಗಾಗಿ ಅಸ್ಪೃಶ್ಯತೆಯಂತಹ ಆಚರಣೆಗಳು ಇಂದಿಗೂ ಸಂಪೂರ್ಣವಾಗಿ ತೊಲಗದೆ, ಸಮಾನತೆಯ ಸಮಾಜ ನಿರ್ಮಾಣದ ಕನಸು ಹುಸಿಯಾಗಿಯೇ ಉಳಿದಿದೆ. ಸಂವಿಧಾನಾತ್ಮಕ ಆಡಳಿತ ಪ್ರಾರಂಭವಾಗಿ ಸುಮಾರು ಆರುದಶಕಗಳಾಗುತ್ತಾ ಬಂದಿದ್ದರೂ ಮನುಷ್ಯರ ನಡುವೆ ಜಾತಿಯ ಸಂಕೋಲೆಗಳು ಅಗಾಧವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರವಲ್ಲ ನಗರ ಪ್ರದೇಶದ ಶಿಕ್ಷಿತ ವಲಯದಲ್ಲಿಯೂ ಜಾತೀಯತೆ ವಿರಾಜಿಸುತ್ತಿರುವುದು ಶೋಚನೀಯ ಸಂಗತಿಯಾಗಿದೆ.

ಮಾನವ ಕೇಂದ್ರಿತ ಚಿಂತನೆಯನ್ನು ಪ್ರಧಾನ ಆಶಯವಾಗುಳ್ಳ ದಲಿತ ಸಾಹಿತ್ಯದ ರಚನೆಗೆ ಡಾ.ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳೇ ಮೂಲ ತಳಹದಿಯಾಗಿವೆ. 1970ರ ದಶಕದಿಂದೀಚೆಗೆ ದಲಿತ ಸಾಹಿತ್ಯ ಚಳುವಳಿಯ ಒಂದು ಭಾಗವಾಗಿ ದಲಿತ ಸಾಹಿತ್ಯವು ಕನ್ನಡದಲ್ಲಿ ಗಟ್ಟಿಯಾಗಿ ಬೆಳೆದಿದೆ. ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಅರವಿಂದ ಮಾಲಗತ್ತಿ, ಬಿ.ಟಿ ಲಲಿತಾನಾಯಕ, ಗೀತಾ ನಾಗಭೂಷಣ ಮೊದಲಾದವರು ಕನ್ನಡದ ದಲಿತ ಸಾಹಿತಿಗಳಾಗಿ

***Please cite this article as:*** ಪ್ರೇಮಲತ ಹೆಚ್.ಎಸ್. (2022). ‘ಹೀಗೊಂದು ಪ್ರಕರಣ’ ಕಥೆಯಲ್ಲಿ ದಲಿತರ ಬದುಕಿನ ಅನಾವರಣ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(5), 78–83.

ಶತಶತಮಾನಗಳ ಕಾಲದ ದಲಿತರ ಬದುಕಿನ ಸಂಕಷ್ಟಗಳು ಹಾಗೂ ಬವಣೆಗಳನ್ನು ತಮ್ಮ ಕೃತಿಗಳ ಮೂಲಕ ಅನಾವರಣಗೊಳಿಸಿದ್ದಾರೆ.

ಇದೇ ಪರಂಪರೆಯ ಮೂಡ್ನಾಕೂಡು ಚಿನ್ನಸ್ವಾಮಿಯವರು ದಲಿತ ಸಮುದಾಯದ ಪ್ರತಿನಿಧಿಯಾಗಿ ನಮ್ಮ ಸಮಾಜದಲ್ಲಿ ಬೇರೂರಿರುವ ಅಸ್ಪೃಶ್ಯತೆಯಂತಹ ಸಾಂಕ್ರಾಮಿಕ ಪಿಡುಗಿನಿಂದ ನಲುಗುತ್ತಿರುವ ದಲಿತರ ಜೀವನದ ಸಮಸ್ಯೆಗಳನ್ನು ಅತ್ಯಂತ ಪ್ರಜ್ಞಾವಂತಿಕೆಯಿಂದ, ಪ್ರಾಮಾಣಿಕ ಕಾಳಜಿಯಿಂದ ಕಟ್ಟಿಕೊಡುತ್ತಾರೆ. ಈ ಸಂಗತಿಯು ಅವರ ಪಾಪಪ್ರಜ್ಞೆ ಎಂಬ ಕಥಾ ಸಂಕಲನದ 'ಹೀಗೊಂದು ಪ್ರಕರಣ' ಕತೆಯಿಂದ ಸ್ಪಷ್ಟಗೊಳ್ಳುತ್ತದೆ. ಗ್ರಾಮೀಣ ಪ್ರದೇಶದ ಒಂದೇ ಕೋಮಿನ ಇಬ್ಬರು ವ್ಯಕ್ತಿಗಳು ತಮ್ಮ ಸ್ವಾರ್ಥಸಾಧನೆ ಹಾಗೂ ಒಣಪ್ರತಿಷ್ಠೆಗಾಗಿ ನಿರಪರಾಧಿಗಳಾದ ದಲಿತ ಕುಟುಂಬವೊಂದನ್ನು ದುರಂತದತ್ತ ದೂಡುವ ನಾಚಿಕೆಗೇಡಿನ ಸಂಗತಿಯನ್ನು ಅತ್ಯಂತ ವಿಷಾದನೀಯ ಹಿನ್ನೆಲೆಯಲ್ಲಿ ಅವರು ಈ ಕಥೆಯ ಮೂಲಕ ಅನಾವರಣಗೊಳಿಸಿದ್ದಾರೆ.

ದೇವಪುರ ಗ್ರಾಮದ ಇಬ್ಬರು ಗೌಡರುಗಳಾದ ಹುಚ್ಚಮಾಸ್ತಿಗೌಡರು ಹಾಗೂ ಮರಿಸಿದ್ಧೇಗೌಡರು ತಮ್ಮ ಊರಿನ ಜನರ ಮೇಲೆ ಬೀರಿದ್ದ ಪ್ರಭಾವವನ್ನು ಕತೆಯು ಹೀಗೆ ಪರಿಚಯಿಸುತ್ತದೆ. ಯಾವ ಕಾನೂನು ಬದ್ಧ ಅಧಿಕಾರವಿಲ್ಲದಿದ್ದರೂ ಊರಿನ ಪಾಲಿಗೆ ಸರ್ವಸ್ವವಾಗಿದ್ದ ಹುಚ್ಚ ಮಾಸ್ತಿಗೌಡರು ಅವರ ತಂದೆಯ ಕಾಲದಿಂದಲೂ ಊರಿನ ಪಟೇಲ, ಶಾನುಭೋಗರಾದಿಯಾಗಿ ಎಲ್ಲರ ಮೇಲೂ ತಮ್ಮ ವರ್ಚಸ್ಸು ಬೀರಿದವರಾಗಿದ್ದು, ಆ ಊರಿನ ಗ್ರಾಮಲೆಕ್ಕಿಗನಂತೂ ಸರ್ಕಾರ ಹಾಗೂ ಗೌಡರ ನಡುವಿನ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಿದ್ದ ರೀತಿ ಪ್ರಶಂಸನೀಯವಾಗಿತ್ತು. ಮಳೆಬೆಳೆಗಳ ಲೆಕ್ಕಾಚಾರ, ಬರಪರಿಹಾರದ ಹಣದ ವಿಲೇವಾರಿ ಎಲ್ಲವೂ ಗೌಡರ ಆಣತಿಯ ಮೇರೆಗೆ ನಡೆಯುವುದರ ಜೊತೆ ಸರ್ಕಾರ ಕಳುಹಿಸುತ್ತಿದ್ದ ಧಾನ್ಯದ ಮೂಟೆಗಳು ಶೆಟ್ಟರ ಅಂಗಡಿಯನ್ನು ಸೇರುತ್ತಿದ್ದವು... ಎಂಬ ಚಿತ್ರಣದಲ್ಲಿ ಗ್ರಾಮಲೆಕ್ಕಿಗ ಹಾಗೂ ಗೌಡರ ನಡುವಿನ ವ್ಯಾವಹಾರಿಕ ಒಪ್ಪಂದಗಳು ತೆರೆದುಕೊಳ್ಳುತ್ತವೆ. ಪರಿಹಾರದ ಹಣ ತಡವಾದರೆ ಊರಿನ ಜನರಿಗೆ ಉಚಿತವಾಗಿ ಧಾನ್ಯಗಳನ್ನು ಹಂಚುತ್ತಿದ್ದ ಗೌಡರ ವ್ಯವಹಾರ ಕೌಶಲ್ಯವನ್ನು, ಅನಂತರ ಜನರಲ್ಲಿ ಅವರ ಬಗ್ಗೆ ಉಂಟಾದ ಸ್ನೇಹ, ಬಾಂಧವ್ಯಗಳನ್ನು ಕಥೆಗಾರರು ಎಳೆಎಳೆಯಾಗಿ ಚಿತ್ರಿಸುವ ಮೂಲಕ ದೇವಪುರ ಗ್ರಾಮದಲ್ಲಿ ಹುಚ್ಚಮಾಸ್ತಿ ಗೌಡರಿಗಿದ್ದ ಪ್ರಭಾವವನ್ನು ತೆರೆದಿಡುತ್ತಾರೆ.

ಅದೇ ಊರಿನ ಮತ್ತೊಬ್ಬ ರಾಜಕೀಯ ಮಹಾತ್ವಾಕಾಂಕ್ಷಿ ಮರಿಸಿದ್ಧೇಗೌಡರು. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಯ ಮೆಂಬರುಗಳೆಲ್ಲಾ ಅವರ ಹಿಂಬಾಲಕರಾಗಿದ್ದು, ಬೆಂಗಳೂರಿನ ರಾಜಕೀಯ ಪ್ರಭಾವದಿಂದ ತಮ್ಮ ಊರಿನ ಎಸ್.ಪಿ, ಸ್ಥಾನಕ್ಕೆ ವರ್ಗ ಮಾಡಿಸಿಕೊಂಡಿದ್ದ ಪ್ರಸನ್ನಕುಮಾರ್ ಎಂಬ ಅಧಿಕಾರಿಯು ತಮ್ಮ ವಿರೋಧಿಯಾಗಿದ್ದ ಹುಚ್ಚಮಾಸ್ತಿಗೌಡರ ಪ್ರಭಾವಕ್ಕೆ ಒಳಗಾಗಿದ್ದುದೇ ಅವರಿಬ್ಬರ ನಡುವಣ ಮನಸ್ತಾಪಕ್ಕೆ ಕಾರಣವಾಗಿತ್ತು ಎಂಬ ಸಂಗತಿಯು ಕಥೆಯ ಮೂಲಕ ತೆರೆದುಕೊಳ್ಳುತ್ತದೆ. ಇವರಿಬ್ಬರ ಈರ್ಷ್ಯೆಗೆ ಅದೇ ಊರಿನ ಶಿವಮಾದು–ಕೆಂಪಮ್ಮ ಎಂಬ ದಲಿತ ದಂಪತಿಗಳು ಬಲಿಯಾಗುವುದೇ 'ಹೀಗೊಂದು ಪ್ರಕರಣ' ಕಥೆಯ ಮೂಲ ವಸ್ತುವಾಗಿದೆ.

ದೇವಪುರದ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನವು ಪರಿಶಿಷ್ಟ ಜಾತಿಗೆ ಮೀಸಲಾಗಿದ್ದು, ಸುಮಾರು ನಾಲ್ಕನೆಯ ತರಗತಿಯವರೆಗೆ ಓದಿ, ತಮ್ಮ ಜಮೀನಿನಲ್ಲಿ ಕೂಲಿ ಕೆಲಸಕ್ಕೆ ಬರುತ್ತಿದ್ದ ಕೆಂಪಮ್ಮ ಎಂಬ ಮಹಿಳೆಯನ್ನು ಚುನಾವಣೆಗೆ ಮರಿಸಿದ್ಧೇಗೌಡರು ನಿಲ್ಲಲು ಪುಸಲಾಯಿಸುವುದರೊಂದಿಗೆ

ಕಥೆಯು ಒಂದು ನಾಟಕೀಯ ತಿರುವನ್ನು ಪಡೆಯುತ್ತದೆ. ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷೆಗಾದಿ ಏರುವುದರೊಂದಿಗೆ ಇತರ ದಲಿತ ಕುಟುಂಬಗಳಿಗೆ ದೊರೆಯದ ಸವಲತ್ತು ಸೌಕರ್ಯಗಳು, ಶಿವಮಾದು–ಕೆಂಪಮ್ಮರಿಗೆ ದೊರೆಯುತ್ತವೆ. ಹೀಗಾಗಿ ಶಿಕ್ಷಣವು ರಾಜಕೀಯ ಸ್ಥಾನಮಾನಗಳಿಗೆ ಕಾರಣವಾಗಿ, ದಲಿತರ ಬದುಕಿನ ಸುಧಾರಣೆಗೂ ಅಡಿಪಾಯವಾಗುತ್ತದೆ ಎಂಬ ಸಂದೇಶವನ್ನು ಕತೆಗಾರರು ನೀಡಿರುವುದು ಆಶಾದಾಯಕವಾಗಿದೆ.

ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯ ಪತಿ ಎಂಬ ಕಾರಣಕ್ಕೆ ತಮ್ಮ ಮನೆಯಲ್ಲಿ ಜೀತಕ್ಕಿದ್ದ ಶಿವಮಾದುವಿನ ಬಗ್ಗೆ ಹುಚ್ಚಮಾಸ್ತಿಗೌಡರು ತಳೆಯುವ ಉದಾರ ನಿಲುವು ಅಧಿಕಾರ ವರ್ಗದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಉಳ್ಳವರ ಖಯಾಲಿಯಂತೆ ತೋರುತ್ತದೆ. ತಮ್ಮ ಸ್ವಂತ ಹಿತಾಸಕ್ತಿಗಳ ಈಡೇರಿಕೆಗಾಗಿ ಇಂತಹ ನಂಟು ಕೆಲವೊಮ್ಮೆ ಅವರಿಗೆ ಅನಿವಾರ್ಯವೂ ಆಗುತ್ತದೆ.

ರಾಜಕೀಯ ಅಧಿಕಾರ ದಲಿತರ ಪರಿಸ್ಥಿತಿಯನ್ನು ಬದಲಾಯಿಸುವ ಒಂದು ಸಾಧನವಾಗಬಲ್ಲದು ಎಂಬ ಅಂಶವು ಕತೆಯಿಂದ ಸ್ಪಷ್ಟಗೊಳ್ಳುತ್ತದೆ. ಹುಚ್ಚಮಾಸ್ತಿಗೌಡರ ಜಗಲಿವರೆಗೂ ಪ್ರವೇಶಮಾಡುವ ಅವಕಾಶ ಶಿವಮಾದುವಿಗೆ ದೊರೆಯುವುದು, ಗೌಡರ ಪತ್ನಿ ರತ್ನಮ್ಮ ಅವನೊಂದಿಗೆ ಆತ್ಮೀಯತೆಯಿಂದ ವರ್ತಿಸುವುದು, ಸೂರಿನ ಸಂದಿಯ ತೆಂಗಿನ ಚಿಪ್ಪಿನ ಬದಲಿಗೆ ಸಿಲವಾರದ ಲೋಟದಲ್ಲಿ ಕಾಫಿ ಕುಡಿಯುವ ಅವಕಾಶಗಳಲ್ಲದೆ ಆತನ ಪತ್ನಿ ಕೆಂಪಮ್ಮನಿಗೆ ರತ್ನಮ್ಮರವರಿಂದ ಬಂದ ಉಡುಗೊರೆಗಳು ಮೊದಲಾದ ಕಥೆಯ ಚಿತ್ರಣದಿಂದ ಈ ಅಂಶವು ದೃಢಗೊಳ್ಳುತ್ತದೆ. ಅವರ ಸಾಮಾಜಿಕ ಸ್ಥಾನಮಾನಗಳು ಉತ್ತಮಗೊಳ್ಳಲು ರಾಜಕೀಯ ಪ್ರವೇಶವು ಕಾರಣವಾಗುತ್ತದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿರುವಂತೆ "ರಾಜಕೀಯ ಅಧಿಕಾರ ಎನ್ನುವುದು ಎಲ್ಲಾ ಅಭಿವೃದ್ಧಿಯ ಬಾಗಿಲುಗಳ ಕೀಲಿ ಕೈ ಇದ್ದಂತೆ"[1] ಎಂಬ ಮಾತನ್ನು ಕತೆಯು ಸ್ಪಷ್ಟಪಡಿಸುತ್ತದೆ. ಅಸ್ಪೃಶ್ಯತೆಯ ಆವರಣದಿಂದ ಹೊರಗೆ ಬಂದು ಅವರು ಆತ್ಮವಿಶ್ವಾಸ, ಸ್ವಾಭಿಮಾನಗಳಿಂದ ಬದುಕುವ ಸಹನೀಯ ವಾತಾವರಣವು ನಿರ್ಮಾಣಗೊಳ್ಳುತ್ತದೆ.

ಗ್ರಾಮಪಂಚಾಯಿತಿಯ ಅಧ್ಯಕ್ಷ ಪದವಿಗೇರಿದ್ದರೂ ಅಧಿಕಾರವು ನಶ್ವರವೆಂಬ ಕಾರಣಕ್ಕೆ ಮರಿಸಿದ್ಧೇಗೌಡರ ಜಮೀನಿಗೆ ಕೂಲಿ ಮಾಡಲು ಹೋಗುವುದನ್ನು ನಿಲ್ಲಿಸದ ಕೆಂಪಮ್ಮ ಪರಿಪೂರ್ಣ ವಿದ್ಯಾವಂತಳಲ್ಲದಿದ್ದರೂ ಪ್ರಜ್ಞಾವಂತೆಯಂತೆ ತೋರುತ್ತಾಳೆ. ಸಾರ್ವಜನಿಕ ವಲಯದಲ್ಲಿ ರಾಜಕಾರಣಿಗಳಿಗೆ ದೊರೆಯುವ ಮನ್ನಣೆ ಕೆಂಪಮ್ಮನಿಗೆ ಸಿಗಲಾರಂಭಿಸುತ್ತದೆ. ಗದ್ದೆಯ ಕೆಲಸ ಮಾಡುವಾಗ ಗ್ರಾಮಪಂಚಾಯಿತಿಯ ಕಾರ್ಯದರ್ಶಿ ಬಂದು ಪತ್ರವೊಂದಕ್ಕೆ ಅವಳಿಂದ ಸಹಿ ಪಡೆಯುವುದು, ಮರಿಸಿದ್ಧೇಗೌಡರ ಭಂಟರು ಇತರ ಆಳುಗಳಂತೆ ಆಕೆಯನ್ನು ಗದರಿಸದೇ ಇರುವುದು, ಪೇಟೆಗೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದ ದಂಪತಿಗಳನ್ನು ಲಾರಿಯೊಂದು ಹತ್ತಿಸಿಕೊಳ್ಳುವುದು, ಹೂ ಮಾರುವವಳು ಉಚಿತವಾಗಿ ಹೂ ನೀಡುವುದು, ಇದರೊಂದಿಗೆ ಚಮ್ಮಾರ ಕೇರಿಯ ದೊಡ್ಡಜ್ಜ ಒಂದು ಜೊತೆ ಚಪ್ಪಲಿಯನ್ನು ಹೊಲೆದು ಕೊಟ್ಟು "ನಮ್ಮ ಜನಕ್ಕೆಲ್ಲಾ ಮರ್ವಾದೆ ತಂದ್ಬುಟ್ಟೆ ತಕ್ಕವ್ವಾ, ಶ್ಯಾಣೆ ಓಡಾಡ್ಬೇಕು ನೀನು, ಇವನ್ ಮೆಟ್ಕೊ"[2] ಎಂದು ಅಭಿಮಾನದಿಂದ ನುಡಿಯುವಾಗ ಕೆಂಪಮ್ಮನಿಗೆ ಧನ್ಯತಾ ಭಾವ ಮೂಡಿ ಕಣ್ಣಲ್ಲಿ ನೀರು ಬರುವುದು ಸಹಜವೇ ಆಗಿದೆ. ಯಾವ ದಲಿತರಿಗೂ ಹಿಂದೆಂದೂ ಕಾಣಸಿಗದ ಸೌಕರ್ಯಗಳು ಶಿವಮಾದು ಕೆಂಪಮ್ಮ ದಂಪತಿಗಳಿಗೆ ದೊರಕುವಂತಾದುದು ರಾಜಕೀಯ ಪ್ರವೇಶದಿಂದ ಎಂಬುದನ್ನು ಕಥೆಗಾರರು ಈ ದಂಪತಿಗಳ ಜೀವನದ ಹಿನ್ನೆಲೆಯಲ್ಲಿ ಸಮರ್ಥಿಸುತ್ತಾರೆ.

ಈ ಎಲ್ಲಾ ವಿದ್ಯಾಮಾನಗಳ ನಡುವೆ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾದ ತನ್ನ ಪತ್ನಿಗೆ ಬಾಲ್ಕನಿಯಲ್ಲಿ ಸಿನಿಮಾ ತೋರಿಸಬೇಕೆಂಬ ಶಿವಮಾದುವಿನ ಉತ್ಸಾಹವು ಕಥೆಯ ಮುಂದಿನ ಎಲ್ಲ ಬೆಳವಣಿಗೆಗೂ ನಾಂದಿಯಾಗುತ್ತದೆ. ಸುರಪುರದ ವೈಯಾರಿ ಸುಮಿತ್ರಾಳೊಂದಿಗೆ ಸಿನಿಮಾ ನೋಡಲು ಬಂದಿದ್ದ ಮರಿಸಿದ್ಧೇಗೌಡರನ್ನು ಬೀಡಿ ಹಚ್ಚುವ ಬೆಳಕಿನಲ್ಲಿ ನೋಡಿ ದಂಪತಿಗಳು ತಬ್ಬಿಬ್ಬಾಗುತ್ತಾರೆ. ದಲಿತರು ತಮ್ಮ ಸಮಾನವಾಗಿ ಕುಳಿತು ಸಿನಿಮಾ ನೋಡಲು ಬಂದ ಉದ್ಧಟತನದ ವರ್ತನೆ ಗೌಡರನ್ನು ಕೆಣಕುವುದಲ್ಲದೆ ತಮ್ಮ ಹುಳುಕು ಬಯಲಾಗುವ ಭಯದಲ್ಲಿ ತತ್ತರಿಸುತ್ತಾರೆ. ಆದರೂ ಅದನ್ನು ತೋರಗೊಡದೆ "ಎಷ್ಟಾಲ್ಲಿ ಕೊಬ್ಬು ನಿಮ್ಗೆ, ಬಾಲ್ಕನಿಗೆ ಬಂದು ನಮ್ಮ ಪಕ್ಕ ಕೂತ್ಗಳ ಹಂಗಾಗ್ಬುಟ್ರಿ, ಹ್ಞೂ ಗೊಬ್ಬರ ಹೊರವರ್ಗೆಲ್ಲಾ ಗಾದಿ ಮೇಲೆ ತಂದು ಕೂರ್ಸಿದ್ರೆ ಹೀಗೇ ಆಗದು"[3] ಎಂದು ದರ್ಪದಿಂದ ನುಡಿದು  ಸರಸರನೆ ಹೊರಡುವುದು ಮುಂದಿನ ದುರಂತಕ್ಕೆ ಬರೆದ ಮುನ್ನುಡಿಯಂತೆ ತೋರುತ್ತದೆ.

ಸಿನಿಮಾ ಮಂದಿರದ ಘಟನೆಯನ್ನು ಶಿವಮಾದು ತನ್ನ ಧಣಿಯಾದ ಹುಚ್ಚಮಾಸ್ತಿ ಗೌಡರಲ್ಲಿ ತಿಳಿಸುವುದೇ ತಡ ಇಡೀ  ಪ್ರಕರಣವು ದುರಂತದ ಹಾದಿಯನ್ನು ಹಿಡಿಯುತ್ತದೆ. ಆ ಇಬ್ಬರೂ ಗೌಡರ ನಡುವಿನ ರಾಜಕೀಯ ವಿದ್ವೇಷ ಮುಗ್ಧ ದಲಿತರ ಬದುಕನ್ನು ದಿಕ್ಕು ತಪ್ಪಿಸುತ್ತದೆ. ಮುಗ್ಧ ದಲಿತ ದಂಪತಿಗಳನ್ನು ಹುಚ್ಚಮಾಸ್ತಿಗೌಡರು ಪೋಲಿಸ್  ಕಂಪ್ಲೇಂಟ್ ಕೊಡುವಂತೆ ಪ್ರೇರೇಪಿಸುತ್ತಾರೆ.ಇದರಿಂದ ಶಿವಮಾದು ಕೆಂಪಮ್ಮ ದಂಪತಿಗಳು ಹಾಗೂ ಮರಿಸಿದ್ಧೇಗೌಡರಲ್ಲಿದ್ದ ಪರಸ್ಪರ ವಿಶ್ವಾಸದ ವಾತಾವರಣವು ಹಾಳಾಗುತ್ತದೆ. "ನೀನು ಹೊಲತಿ, ಗೊಬ್ಬರ ಹೊರವವಳು" ಎಂದು ಮೂದಲಿಸಿ ಮಾತನಾಡಿದರೆಂದು ಮರಿಸಿದ್ಧೇಗೌಡರ ವಿರುದ್ಧ ಗ್ರಾಮಪಂಚಾಯಿತಿ ಅಧ್ಯಕ್ಷೆ ಕೆಂಪಮ್ಮನಿಂದ ಹುಚ್ಚಮಾಸ್ತಿಗೌಡರು ತಾವೇ ಖುದ್ದು ಪೋಲಿಸ್ ಸ್ಟೇಷನ್‌ಗೆ ಕರೆದೊಯ್ದು ಕಂಪ್ಲೆಂಟ್ ಕೊಡಿಸುತ್ತಾರೆ. ಪರಿಣಾಮವಾಗಿ ಮರಿಸಿದ್ಧೇಗೌಡರು ಆರೆಸ್ಟ್ ಆಗಿ ಲಾಕಪ್ಪಿನಿಂದ ಕೋರ್ಟು ಮುಂದೆ ಹಾಜರಾಗುವ ಪ್ರಸಂಗ ಎದುರಾಗುತ್ತದೆ. ಇಬ್ಬರು ಗೌಡರ ಜಿದ್ದಾಜಿದ್ದಿ ಊರಿನಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡುತ್ತದೆ. ಒಂದೇ ಜಾತಿಯ ಇಬ್ಬರು ಕುಳಗಳ ಸ್ವಪ್ರತಿಷ್ಠೆ ಈ ಮಟ್ಟಕ್ಕೆ ಹೋಗಬಾರದಾಗಿತ್ತೆಂಬ ಜನರ ಪ್ರತಿಕ್ರಿಯೆಯಲ್ಲಿ ಗ್ರಾಮೀಣ ಪರಿಸರದ ತಿಳಿಯಾದ ವಾತಾವರಣವನ್ನು ಉಳ್ಳವರ ಸ್ವಪ್ರತಿಷ್ಠೆ ಹಾಗೂ ರಾಜಕೀಯ ವಿದ್ಯಾಮಾನಗಳು ಕಲುಷಿತಗೊಳಿಸುವ ಚಿತ್ರಣವನ್ನು ಕತೆಗಾರರು ಒದಗಿಸುತ್ತಾರೆ.

ಜಾತಿನಿಂದನೆಯಂತಹ ಕೇಸ್‌ನಿಂದ ತಮ್ಮ ಪತಿ ಸುರಕ್ಷಿತವಾಗಿ ಹೊರಬರಲೆಂಬ ಉದ್ದೇಶದಿಂದ ಮರಿಸಿದ್ಧೇಗೌಡರ ಪತ್ನಿ ಕಾಮಾಕ್ಷಮ್ಮ ಹೊಲಗೇರಿಯ ಕೆಂಪಮ್ಮನ ಗುಡಿಸಿಲಿನ ಮುಂದೆ ಕೈಯೊಡ್ಡಿ ನಿಲ್ಲಬೇಕಾಗುತ್ತದೆ. ಆ ಸಂದರ್ಭದಲ್ಲಿ 'ತಾನು ಹಾಕಿಕೊಂಡು ಬಂದ ಚಪ್ಪಲಿಯನ್ನು ಕೇರಿಯಿಂದ ಹೊರಗಡೆ ಅನಂತರ ಬಿಸಾಕಿದರಾಯಿತು' ಎಂಬ ಆಕೆಯ ಧೋರಣೆಯಲ್ಲಿ ದಲಿತರನ್ನು ಕುರಿತ ಮೇಲ್ಜಾತಿಯ ಜನರ ಕೀಳು ಮನಸ್ಥಿತಿಯು ವ್ಯಕ್ತಗೊಂಡಿದೆ. ಈ ಪ್ರಕರಣದ ಇತ್ಯರ್ಥಕ್ಕೆ ಅದೇ ಊರಿನ ದಲಿತ ಸಂಘರ್ಷ ಸಮಿತಿಯ ಮುಖಂಡ ಕುಮಾರಸ್ವಾಮಿಯ ಪ್ರವೇಶವಾಗುತ್ತಿದ್ದಂತೆ ಇಡೀ ಪ್ರಕರಣವು ರಾಜಿಸೂತ್ರದತ್ತ ಮುಖಾಮುಖಿಯಾಗುತ್ತದೆ. ದಲಿತರು ಮೇಲ್ಜಾತಿಯ ಪ್ರತಿಷ್ಠಿತರಾದ ಮರಿಸಿದ್ಧೇಗೌಡರನ್ನು ಎದುರು ಹಾಕಿಕೊಂಡು ಬದುಕಲಾಗದು. ಅದರಲ್ಲೂ ಕೆಂಪಮ್ಮನನ್ನು ರಾಜಕೀಯವಾಗಿ ಮೇಲೆ ತಂದವರು ಮರಿಸಿದ್ಧೇಗೌಡರು. ಅಂಥವರ ಬಗ್ಗೆ ಕೃತಘ್ನತೆಯಿಂದ ನಡೆದುಕೊಳ್ಳಬಾರದೆಂಬ ಮನವೊಲಿಕೆಯ ಪ್ರಯತ್ನವನ್ನು ಕುಮಾರಸ್ವಾಮಿ ಮಾಡುತ್ತಾನೆ. ದಲಿತರು ಎಂದಿಗೂ ಶ್ರೀಮಂತರಾದ ಮೇಲ್ಜಾತಿಯ ಜನರನ್ನು ಎದುರು ಹಾಕಿಕೊಳ್ಳಬಾರದು ಎಂಬ ನಿಟ್ಟಿನಲ್ಲಿ

ಕೆಂಪಮ್ಮನಿಗೆ ಹಿತೋಪದೇಶವಾಗುತ್ತದೆ. ಅನಂತರ ತನ್ನ ಗಂಡನ ವರ್ತನೆಯ ಬಗ್ಗೆ ಕೆಂಪಮ್ಮ ಗೊಂದಲಕ್ಕೀಡಾಗುವುದು ಆಕೆಯ ಅತಂತ್ರ ಮನಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ತಮ್ಮಿಂದ ಮರಿಸಿದ್ಧೇಗೌಡರ ವಿರುದ್ಧ ಪೋಲಿಸ್ ಕಂಪ್ಲೇಂಟ್ ಕೊಡಿಸಿದ ಹುಚ್ಚಮಾಸ್ತಿಗೌಡರ ಬಳಿ ಬಂದು ರಾಜಿಯಾಗುವ ತಮ್ಮ ನಿರ್ಧಾರವನ್ನು ದಲಿತ ದಂಪತಿಗಳು ಪ್ರಕಟಿಸುತ್ತಾರೆ. ಈಗಾಗಲೇ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿದ್ದ ಹುಚ್ಚಮಾಸ್ತಿಗೌಡರು "ಈಗ ಅವನಿಗೆ ಅಹಂಕಾರ ಇಳಿದುಹೋಗಿರುತ್ತದೆ ಆಯ್ತು" ಎಂದು ತಣ್ಣಗೆ ಪ್ರತಿಕ್ರಿಯಿಸುವುದು ಮಾತ್ರ ಅತಿರೇಕದ ಪರಮಾವಧಿಯಂತೆ ತೋರುತ್ತದೆ. ತಮ್ಮ ದ್ವೇಷ ಸಾಧನೆಗೆ ಮುಗ್ಧ ದಲಿತ ದಂಪತಿಗಳನ್ನು ಮೆಟ್ಟಿಲಾಗಿ ಬಳಸಿಕೊಂಡ ಸಂತೃಪ್ತಿ ಅವರಲ್ಲಿ ಎದ್ದು ಕಾಣುತ್ತದೆ. ಅತೀ ಮುತುವರ್ಜಿಯಿಂದ ಈ ಕೇಸನ್ನು ಕೈಗೆತ್ತಿಕೊಂಡಿದ್ದ ದಲಿತ ಅಧಿಕಾರಿ ಎಸ್ ಐ. ಎಲ್ಲಪ್ಪನವರ  ಮಾತಿಗೂ ಜಗ್ಗದ ಕೆಂಪಮ್ಮ ಊರಿನ ಶಾಂತಿಗಾಗಿ ತಾವು ಕೇಸ್ ವಾಪಸ್ ತೆಗೆದುಕೊಳ್ಳುತ್ತಿದ್ದೇವೆ, ಅಧಿಕಾರ ಮುಗಿದ ನಂತರ ದುಡಿದು ತಿನ್ನುವ ಜನರಾದ ತಾವು ಅವರ ಮನೆ ಬಾಗಿಲಿಗೆ ಹೋಗಲೇಬೇಕಾದ ಅನಿವಾರ್ಯತೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುವುದು ಜಾತಿಯಿಂದ  ಬಲಾಢ್ಯರಾದ, ಶ್ರೀಮಂತರ ದರ್ಪದ ನೆರಳಲ್ಲಿ ದಲಿತರ ಬದುಕು ಸಾಗಬೇಕಾಗಿರುವ ಅನಿವಾರ್ಯತೆಗೆ ಕನ್ನಡಿ ಹಿಡಿಯುತ್ತದೆ.

ತಮ್ಮ ಉದ್ದೇಶ ಈಡೇರಿದ ಬಳಿಕ ಹುಚ್ಚಮಾಸ್ತಿಗೌಡರು ತಮ್ಮ ಮನೆಯ ಜೀತದಾಳು ಶಿವಮಾದನನ್ನು ಆತ್ಮೀಯವಲಯಕ್ಕೆ ತೆಗೆದುಕೊಳ್ಳುತ್ತಾರೆ. ಗುಂಡು ಪಾರ್ಟಿಯಲ್ಲಿ ಅವರಿಬ್ಬರೂ ಮೈಮರೆತಿರುವಾಗ ಮಧ್ಯವಯಸ್ಸಿನ ಗೌಡರ ಪತ್ನಿ ರತ್ನಮ್ಮ ಶಿವಮಾದುವಿನತ್ತ ಆಕರ್ಷಿತಳಾಗುವ ಸಂದರ್ಭವನ್ನು ಅತ್ಯಂತ ಸೂಚ್ಯವಾದ ನೆಲೆಯಲ್ಲಿ ಕತೆಯು ಅನಾವರಣಗೊಳಿಸುತ್ತದೆ. ತನ್ನ ರಾಜಕೀಯ ಗುಂಗಿನಲ್ಲಿ ಮೈಮರೆತ ಕೆಂಪಮ್ಮನಿಗೆ ಇದರ ಸುಳಿವು ದೊರೆಯದಿರುವುದು ವಿಷಾದನೀಯವೆನಿಸಿದರೂ ತಮ್ಮ ಹೆಂಡತಿಯ ಬದಲಾದ ವರ್ತನೆ ಹುಚ್ಚಮಾಸ್ತಿಗೌಡರ ಅರಿವಿಗೆ ಬರದೇ ಇರುವುದಿಲ್ಲ. ಈ ಪ್ರಕರಣ ತಾರಕಕ್ಕೆ ಹೋಗಿ ಶಿವಮಾದುವಿನ ಕೊಲೆಯಲ್ಲಿ ಮುಕ್ತಾಯಗೊಳ್ಳುತ್ತದೆ. ಈ ಸಂಬಂಧವಾಗಿ ಹುಚ್ಚಮಾಸ್ತಿಗೌಡರು ಅರೆಸ್ಟ್ ಅಗಬೇಕಾಗುತ್ತದೆ. ಶಿವಮಾದುವಿನ ಕೊಲೆ ಪ್ರಕರಣವು ಹಲವಾರು ತಿರುವುಗಳನ್ನು ಪಡೆದುಕೊಳ್ಳುವುದು ಕತೆಯ ಅರ್ಥಪೂರ್ಣತೆಗೆ ಸಾಕ್ಷಿಯಾಗಿದೆ. ದಲಿತರಿಗೆ ದೊರೆತ ಅಧಿಕಾರವನ್ನು ಸಹಿಸದ ಜನರು ಹೀಗೆ ಮಾಡಿದ್ದಾರೆಂಬ ಕೆಂಪಮ್ಮನ ಗೋಳಿನಲ್ಲಿ ಮೇಲ್ನೋಟದ ಸತ್ಯವಿದ್ದರೂ ಇದು ದಲಿತರ ಮೇಲೆ ಎಸಗಿದ ದೌರ್ಜನ್ಯವೆಂಬ ಅನುಮಾನ ಬಲವಾಗುತ್ತದೆ. ಮರಿಸಿದ್ಧೇಗೌಡರು ದಲಿತ ಮಹಿಳೆಯ ಅದರಲ್ಲೂ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿದ್ದ ಕೆಂಪಮ್ಮನ ಪತಿಯ ಕೊಲೆಗೆ ತಮ್ಮ ವೈರಿಯಾಗಿದ್ದ ಹುಚ್ಚಮಾಸ್ತಿಗೌಡರೇ  ಕಾರಣವೆಂದು ರಾಜಕೀಯ ಪಿತೂರಿ ಮಾಡಿ  ಸೆರಮನೆಗೆ  ತಳ್ಳಿಸುವುದರಲ್ಲಿ ಯಶಸ್ವಿಯಾಗುತ್ತಾರೆ. ಈ ಮಧ್ಯೆ ದಲಿತ ಸಂಘರ್ಷ ಸಮಿತಿಗಳ ಮಧ್ಯಸ್ಥಿಕೆಯೂ ನಡೆಯುತ್ತದೆ. ಶಿವಮಾದುವಿನ ಕೊಲೆಯ ಹಿಂದಿನ ಕಾರಣವನ್ನು ಪತ್ತೆ ಹಚ್ಚಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸುವುದಕ್ಕಿಂತ ಆತನ ಪತ್ನಿಗೆ ಪರಿಹಾರ ಕೊಡಿಸಲು ಮುಂದಾಗುವ  ದಲಿತ ಮುಖಂಡರ ಧೋರಣೆಯಲ್ಲಿ ದಲಿತರ ಪರವಾದ ಕಾನೂನುಗಳು ಸೊರಗುವ ಚಿತ್ರಣವಿದೆ.

ಅಸ್ಪೃಶ್ಯತೆಯ ಆಚರಣೆಯ ತಡೆಗೆ ಸರ್ಕಾರ ಮಾಡುವ ಕಾನೂನುಗಳ ಹಿಂದಿನ ನಿಜವಾದ ಉದ್ದೇಶ ಉಳ್ಳವರ ಮರ್ಜಿಗೋ ಶೋಷಿತರ ಸಣ್ಣ ಪುಟ್ಟ ಪರಿಹಾರಗಳ ಆಸೆಯಲ್ಲಿಯೋ ತೆರೆಮರೆಗೆ ಸರಿಯುವುದರ ಮೂಲಕ ಸಾಮಾಜಿಕ ಅಸಮಾನತೆ ಗಟ್ಟಿಯಾಗಿ ಬೇರೂರುವ ಚಿತ್ರಣವನ್ನು ಕತೆಯು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಈ ಹಿನ್ನೆಲೆಯಲ್ಲಿ ಅರವಿಂದ ಮಾಲಗತ್ತಿಯವರ ಈ ಮಾತುಗಳು

ಅರ್ಥಪೂರ್ಣವಾಗಿದೆ. "ಧರ್ಮ, ಮತ, ಜನಾಂಗ, ವರ್ಣ, ಕುಲ, ಜಾತಿ ಇವು ಸದಾಕಾಲ ನಮ್ಮೊಂದಿಗೆ ಇರುವಂತಹವುಗಳೇ ಆಗಿದ್ದು, ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ಘಟಕಗಳು ಹಿಗ್ಗುತ್ತವೆ, ಕುಗ್ಗುತ್ತವೆಯೇ ಹೊರತು ನಾಶಹೊಂದುವುದಿಲ್ಲ."[4] ಹೀಗೆ ಶಿವಮಾದುವಿನ ಕೊಲೆಯ ಪ್ರಕರಣದಂತಹ ಗಂಭೀರವಾದ ಘಟನೆಯಿಂದ ಪ್ರಾರಂಭಗೊಳ್ಳುವ ಕಥೆಯು ಅದರ ಕಾರಣಗಳನ್ನು ಶೋಧಿಸುತ್ತಲೇ ದಲಿತರ ಬದುಕಿನ ನೋವು ನಲಿವುಗಳ ಜೊತೆಗೆ ಅವರ ಬದುಕಿನ ಇತಿಮಿತಿಗಳನ್ನು ಅನಾವರಣಗೊಳಿಸುತ್ತದೆ.

**ಕೊನೆಟಿಪ್ಪಣಿಗಳು**

1. ಪ್ರಜಾನುಡಿ ದಿನಪತ್ರಿಕೆ. (2016, ಏಪ್ರಿಲ್ 10). ಮೈಸೂರು.
2. ಮೂಡ್ನಾಕೂಡು ಚಿನ್ನಸ್ವಾಮಿ. (2015). ಪಾಪಪ್ರಜ್ಞೆ, ಪು.ಸಂ.27
3. ಅದೇ. ಪುಟ 28–29
4. ಅರವಿಂದ ಮಾಲಗತ್ತಿ. (1999). *ಪ್ರಸ್ತಾವನೆ.* ದಲಿತ ಯುಗ ಮತ್ತು ಕನ್ನಡ ಸಾಹಿತ್ಯ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ, (1999). *ದಲಿತ ಯುಗ ಮತ್ತು ಕನ್ನಡ ಸಾಹಿತ್ಯ.* ಚೇತನ ಬುಕ್ ಹೌಸ್.
- ಮೂಡ್ನಾಕೂಡು ಚಿನ್ನಸ್ವಾಮಿ. (2015). *ಪಾಪಪ್ರಜ್ಞೆ,* ಜೋಳಿಗೆ ಪ್ರಕಾಶನ.